# ಬೇರುಗಳ ಮರು ಹುಡುಕಾಟ

ಸ್ವಲ್ಪ ಅಮೆರಿಕನ್ ಡಾಲರ್ ಮತ್ತು ಸ್ವಲ್ಪ ಕೆ.ಡಿ.ಯಷ್ಟೇ ನನ್ನ ಕೈಯಲ್ಲಿದ್ದಿದ್ದು. ಆದರೆ ಕುವೈತ್ ದೀನಾರನ್ನು ಇರಾಕ್ ದೀನಾರ್ ಕೆಳಕ್ಕೆ ತಳ್ಳಲು ಪ್ರಾರಂಭಿಸಿತು. ಅಸಲಿಗೆ ನನ್ನ ಕೈಯಲ್ಲಿ ಒಂದೇ ಒಂದು ಇರಾಕ್ ದೀನಾರ್ ಇರಲಿಲ್ಲ. ಕೈಯಲ್ಲಿದ್ದ ಹಣವೆಲ್ಲಾ ಮುಗಿಯುತ್ತಾ ಬಂದಿದೆಯೆಂದುಕೊಂಡಾಗ ನಾನು ತೊಂದರೆಗೆ ಸಿಕ್ಕಿ ಬೀಳಬೇಕಾಯಿತು. ಕೈಗೆ ಸಿಗುವ ವಸ್ತುಗಳನ್ನು ಟೊಯಾಟೊದಲ್ಲಿ ಹಾಕಿ ಊರು ಬಿಟ್ಟರೆ ಹೇಗೆಂದು ಯೋಚಿಸಿದೆ. ಯುದ್ಧದ ಗಡಿಯಾಚೆ ಹಾರಿಹೋಗಿ ಬಾಂಬ್‌ನ ದಾಳಿಯಿಂದ ಉಳಿದುಕೊಂಡು ಒಂದು ಅಜ್ಞಾತವಾಸದತ್ತ ತೆರಳಬಹುದು. ಆದರೆ ಅದೂ ಸಾಧ್ಯವಿರಲಿಲ್ಲ. ಕೆಳಗೆ ನನ್ನ ಕಾರು ವರ್ಕ್‌ಶಾಪ್‌ನಲ್ಲಿತ್ತು. ನಾಲ್ಕು ಚಕ್ರಗಳನ್ನು ಯಾರೋ ಕೊಂಡೊಯ್ದಿದ್ದರು. ಕಿಟಕಿಯ ಗಾಜನ್ನು ಒಡೆದು ಸ್ಟೀರಿಯೊವನ್ನು ಕದ್ದೊಯ್ದಿದ್ದರು. ಅದೂ ನನಗೆ ಕಷ್ಟವಾಯಿತು. ಮೊದಲೇ ಒಳ್ಳೆಯ ಸಮಯದಲ್ಲಿ ಊರು ಬಿಟ್ಟಿದ್ದರೆ ಚೆನ್ನಾಗಿತ್ತು.

ಅತ್ಯಗತ್ಯವೆನಿಸಿದ ಬಟ್ಟೆ ಬರೆಗಳನ್ನು ಒಂದು ಸೂಟ್‌ಕೇಸಿಗೆ ತುರುಕಿ ನಾನು ಬೀದಿಗಿಳಿದೆ. ಇರಾಕಿ ಭಾಷೆ ಗೊತ್ತಿಲ್ಲದೆ ಇದ್ದುದರಿಂದ ಮಿಲಿಟರಿ ಸೈನ್ಯದವರ ಬೈಗುಳಾಭಿಷೇಕ ಕೆಸುವಿನ ಎಲೆಯ ಮೇಲೆ ಬಿದ್ದ ನೀರಿನಂತೆ ಸ್ವಲ್ಪಹೊತ್ತು ಕಟ್ಟಿನಿಂತು ಕೆಳಗೆ ಬಿದ್ದು ಚದುರಿತು.

ಒಳದಾರಿ, ಕಳ್ಳದಾರಿಯಲ್ಲೆಲ್ಲ ನಡೆದು ಕೊನೆಗೆ ಎಂಬಸ್ಸಿಗೆ ಬಂದು ತಲುಪಿದೆ. ಅಷ್ಟರಲ್ಲಿ ಹೋಗಲು ಬಾಕಿಯಿರುವವರ ದೊಡ್ಡ ಸಾಲು ರೂಪುಗೊಂಡಿತ್ತು. ತುಂಬಾ ಉದ್ದದ ಕ್ಯೂವಿನಲ್ಲಿ ನಾನು ಕೊನೆಯವನಾಗಿದ್ದೆ. ಒಂದು ಗಂಟೆ ಕಾಲ ಕಳೆಯುವಷ್ಟರಲ್ಲಿ ಕೆಮ್ಮುತ್ತಲೇ ಇದ್ದ ಒಬ್ಬ ರಾಜಸ್ತಾನಿ ಮುದುಕ ನನ್ನ ಹಿಂದೆ ಬಂದು ನಿಂತ. ಯುದ್ಧದ ದುಷ್ಪರಿಣಾಮದ ಜೊತೆಗೆ ಕೆಮ್ಮನ್ನೂ ಹೊತ್ತು ನಡೆಯಬೇಕೇ ಎಂದು ನಾನು ಅಂಜಿದೆ.

ನಾನು ಕಳೆದುಕೊಂಡಿದ್ದ ಎಲ್ಲಾ ವಿವರಗಳನ್ನು ಎಂಬಸ್ಸಿಯಲ್ಲಿ ಬರೆದುಕೊಟ್ಟೆ. ನಾನು ತಲುಪಬೇಕಾದ ಸ್ಥಳನಾಮವನ್ನು ದಾಖಲಿಸಿದೆ. ಒಂದು ಟ್ರಕ್ಕಿನಲ್ಲಿ ನಿರಾಶ್ರಿತರ ಶಿಬಿರಕ್ಕೆ ನನ್ನನ್ನು ಕರೆದೊಯ್ದರು. ಅದೊಂದು ಪ್ರಯಾಸದ ಪ್ರಯಾಣವಾಗಿತ್ತು. ಎಲ್ಲವೂ ಸ್ವಂತವೆಂದು ಬೀಗಿದವರು ಎಲ್ಲವನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದರು. ಮಗನನ್ನು ಕಳೆದುಕೊಂಡ ತಾಯಿ ಯಾವುದೋ ಭಾಷೆಯಲ್ಲಿ ಹಲುಬುತ್ತಿದ್ದಳು. ಗಾಡಿಯಲ್ಲಿದ್ದವರು ಪರಸ್ಪರ ಆರೇಳು ಭಾಷೆಗಳಲ್ಲಿ ತಮಗಾದ ನಷ್ಟದ ಲೆಕ್ಕಾಚಾರ ಹಾಕುತ್ತಿದ್ದರು.

